## ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಜಗಳೂರು

## ಸಿ.ಸಿ.ನಂಃ 398/2022

ಫಿರ್ಯಾದಿದಾರ: ಭರತ್ ರಾಜ್ ಜಿ. ಪಿ. ತಂದೆ ಪ್ರತಾಪ್ ಕುಮಾರ್ ಜೆ. ಎ.,
ವಯಸ್ಸುಃ 34 ವರ್ಷ, ವೃತ್ತಿ: ಗ್ರಂಥಿಗಿ ಅಂಗಡಿ ಮಾಲೀಕರು & ಪಿಗ್ಮಿ ಸಂಗ್ರಹಕಾರರು,
ವಾಸಃ ಶ್ರೀ ಲಕ್ಷ್ಮೀ ವೆಂಕಟೇಶ್ವರ ನಿಲಯ, ಪಟೇಲ್ ರಸ್ತೆ,
ಜಗಳೂರು ಪಟ್ಟಣ,
ಜಗಳೂರು ತಾ. ದಾವಣಗೆರೆ ಜಿಲ್ಲೆ.

-:: **ವಿರುದ್ಧ** ::-

ಆರೋಪಿ : ಭರತ್ ಕುಮಾರ್ ಜೆ. ಹೆಚ್. ತಂದೆ ಬಿ. ಎಸ್. ಹಾಲಪ್ಪ,
ವಾಸಃ ಬಸವೇಶ್ವರ ನಿಲಯ, ರಾಮಾಲಯ ರಸ್ತೆ,
ಜಗಳೂರು ತಾ. ದಾವಣಗೆರೆ ಜಿಲ್ಲೆ.

### ಆಪಾದನೆ

ಆರೋಪಿಯಾದ ನೀವು ಫಿರ್ಯಾದಿದಾರರಿಂದ ಮನೆತನದ ಖರ್ಚಿಗಾಗಿ ದಿನಾಂಕ 12/11/2021 ರಂದು ರೂ.5,00,000/- ಗಳನ್ನು ಸಾಲವಾಗಿ ಪಡೆದು ಅದರ ಭದ್ರತೆಗಾಗಿ ಜಗಳೂರು ಶಾಖೆಯ ಭಾರತೀಯ ಸ್ಟೇಟ್ ಬ್ಯಾಂಕಿನ ಚೆಕ್ ನಂ.604705 ನೇದ್ದನ್ನು ದಿನಾಂಕ 02/02/2022 ಎಂದು ನಮೂದು ಮಾಡಿ ನೀಡಿದ್ದು, ಸದರಿ ಚೆಕ್ಕನ್ನು ಜಗಳೂರು ಶಾಖೆ, ಕೆನರಾ ಬ್ಯಾಂಕಿಗೆ ನಗದೀಕರಣಕ್ಕಾಗಿ ಹಾಕಿದಾಗ, ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲವೆಂಬ ಹಿಂಬರಹದೊಂದಿಗೆ ಚೆಕ್ಕು ಅಮಾನ್ಯಗೊಂಡಿರುತ್ತದೆ. ಆದ್ದರಿಂದ ಆರೋಪಿಯಾದ ನಿಮಗೆ ವಕೀಲರ ಮೂಲಕ ನೋಟೀಸ್ ಕೊಟ್ಟು ತಿಳಿಸಿದರೂ ಸಹಾ ಮೋಸ ಮಾಡುವ ಉದ್ದೇಶದಿಂದ ಹಣವನ್ನು ತೀರುವಳಿ ಮಾಡದೇ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಾ. ಆದ್ದರಿಂದ ಆರೋಪಿಯಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಕಲಂ 138 ಸಹ ವಾಚಕ ಕಲಂ 142 ನೆಗೋಷಿಯಬಲ್ ಇನ್ಸ್ಟ್ರುಮೆಂಟ್ ಕಾಯ್ದೆ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಾ ಎಂದು ಆಪಾದಿಸಲಾಗಿದೆ.

**<u>ಆರೋಪಿ ಹೇಳಿಕೆ</u>**

ಪ್ರಶ್ನೆಃ ಈ ಮೇಲೆ ಹೇಳಲಾದ ಆಪಾದನೆ ನಿಮಗೆ ತಿಳಿಯಿತೇ?

ಉತ್ತರಃ

ಪ್ರಶ್ನೆಃ ಈ ಮೇಲೆ ಹೇಳಲಾದ ಆಪಾದನೆಯನ್ನು ನೀನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕೋ?

ಉತ್ತರಃ

(ಈ ಮೇಲಿನ ಆಪಾದನೆಯ ಸಾರಾಂಶವನ್ನು ಆರೋಪಿಗೆ ನಾನೇ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಅಂತ ಈ ಮೂಲಕ ದೃಢೀಕರಿಸುತ್ತೇನೆ.)

ಸ್ಥಳಃ ಜಗಳೂರು,

ದಿನಾಂಕ :11/08/2023. Sd/-

**ದಿ. ನ್ಯಾ. ಹಾಗೂ ಪ್ರ.ದ.ನಾ. ದಂಡಾಧಿಕಾರಿ,**

**ಜಗಳೂರು.**